INSTAKAS

# ರಾಖಿಗರ್ಹಿ - ಹರಪ್ಪ ನಾಗರೀಕತೆಯ ತಾಣ

## ಇದೀಗ ಸುದ್ದಿಯಲ್ಲಿದೆ:

- ಪ್ರಾಚೀನ ಹರಪ್ಪ ನಾಗರೀಕತೆಯ ತಾಣವಾದ ರಾಖಿಗರ್ಹಿಯ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರವು ತನ್ನ ಮುಂಗಡ ಪತ್ರದಲ್ಲಿ **₹500 ಕೋಟಿ ರೂ.ಗಳನ್ನು** ಹಂಚಿಕೆ ಮಾಡಿದೆ.

## ಈ ಉಪಕ್ರಮದ ಬಗ್ಗೆ:

**ಗುರಿ:-** ಈ ಉಪಕ್ರಮವು ವಿಶ್ವದಾದ್ಯಂತ ಭಾರತದ ಪುರಾತತ್ವ ಉಪಸ್ಥಿತಿಯನ್ನು ಬಲಪಡಿಸುವಲ್ಲಿ ರಾಖಿಗರ್ಹಿಯನ್ನು ಪ್ರಮುಖ ಸ್ಥಾನದಲ್ಲಿ ಇರಿಸುವ ನಿರೀಕ್ಷೆಯಿದೆ.

## ರಾಖಿಗರ್ಹಿ



**ಅತಿದೊಡ್ಡ ಹರಪ್ಪ ನಾಗರೀಕತೆಯ ತಾಣ:-** ಇದು ಭಾರತೀಯ ಉಪಖಂಡದಲ್ಲಿನ ಅತಿದೊಡ್ಡ ಹರಪ್ಪ ನಾಗರೀಕತೆಯ ತಾಣವಾಗಿದೆ.

**ಸ್ಥಳ:- ಹರಿಯಾಣದ ಹಿಸಾರ್ ಜಿಲ್ಲೆಯಲ್ಲಿದೆ.**
**ನದಿ ವ್ಯವಸ್ಥೆ:- ಘಗ್ಗರ್-ಹಕ್ರಾ** ನದಿ ಬಯಲಿನಲ್ಲಿ ನೆಲೆಗೊಂಡಿದೆ.

ಅಮರೇಂದ್ರ ನಾಥ:- ಈ ತಾಣವನ್ನು ಮೊದಲ ಬಾರಿಗೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ASI) ಅಮರೇಂದ್ರ ನಾಥ್ ಅವರು ಉತ್ಖನನ ಮಾಡಿದರು.

## ಹರಪ್ಪ ನಾಗರೀಕತೆಯ ಬಗ್ಗೆ:

**ವಿಶ್ವದ ಅತ್ಯಂತ ಹಳೆಯ ನಾಗರೀಕತೆಗಳಲ್ಲಿ ಒಂದು:-** ಈ ನಾಗರೀಕತೆಯು **ಈಜಿಪ್ಟ್ ಮತ್ತು ಮೆಸಪೊಟೇಮಿಯಾ** ನಾಗರೀಕತೆಗಳ ಜೊತೆಗೆ ವಿಶ್ವದ ಅತ್ಯಂತ ಹಳೆಯ ನಾಗರೀಕತೆಗಳಲ್ಲಿ ಒಂದಾಗಿದೆ ಎಂದು ನಂಬಲಾಗಿದೆ.

**ಸಿಂಧೂ ಕಣಿವೆ ನಾಗರೀಕತೆ:-** ಇದು **ಸಿಂಧೂ ನದಿಯ ಉದ್ದಕ್ಕೂ ಅಭಿವೃದ್ಧಿಗೊಂಡಿದ**ರಿಂದ, ಇದನ್ನು ಸಿಂಧೂ ಕಣಿವೆ ನಾಗರೀಕತೆ ಎಂತಲೂ ಕರೆಯಲಾಗುತ್ತದೆ.

**ಕಂಚಿನ ಯುಗದ ನಾಗರೀಕತೆ:-** ಈ ನಾಗರೀಕತೆಯನ್ನು ಕಂಚಿನ ಯುಗದ ನಾಗರಿಕತೆ ಎಂತಲೂ ಗುರುತಿಸಲಾಗಿದೆ. ಏಕೆಂದರೆ **ತಾಮ್ರ ಆಧಾರಿತ ಮಿಶ್ರಲೋಹಗಳಿಂದ ತಯಾರಿಸಲ್ಪಟ್ಟ ಅನೇಕ ವಸ್ತುಗಳು ಇಲ್ಲಿ ಕಂಡುಬಂದಿವೆ.**

## ಹರಪ್ಪ ನಾಗರೀಕತೆಯ ಪ್ರಮುಖ ತಾಣಗಳು:

| ತಾಣ | ಪ್ರಸ್ತುತ ಸ್ಥಳ | ತಾಣ | ಪ್ರಸ್ತುತ ಸ್ಥಳ |
|---|---|---|---|
| ಹರಪ್ಪ | ಪಂಜಾಬ್, (ಪಾಕಿಸ್ತಾನ) | ರಾಖಿಗರ್ಹಿ | ಹರಿಯಾಣ |
| ಮೊಹೆಂಜೊ-ದಾರೊ | ಸಿಂಧ್, (ಪಾಕಿಸ್ತಾನ) | ಚಾನ್ಹುದಾರೊ | ಸಿಂಧ್, (ಪಾಕಿಸ್ತಾನ) |
| ಧೋಲವೀರ | ಗುಜರಾತಿನ ಕಚ್ ಜಿಲ್ಲೆ | ಗನ್ವೇರಿವಾಲಾ | ಪಂಜಾಬ್, (ಪಾಕಿಸ್ತಾನ) |
| ಕಾಲಿಬಂಗನ್ | ರಾಜಸ್ಥಾನ | ಸುತ್ಕಜೆಂಡೋರ್ | ಬಲೂಚಿಸ್ತಾನ್ ಪ್ರಾಂತ್ಯ, (ಪಾಕಿಸ್ತಾನ) |
| ಲೋಥಲ್ | ಗುಜರಾತ್ | ಆಲಂಗೀರ್‌ಪುರ | ಉತ್ತರ ಪ್ರದೇಶ |